
# ಮಸೂರಿಯಲ್ಲಿ ಮಾನ್ಸೂನ್ ರಾಗ



ಮುಂಗಾರಿನಲ್ಲಿ ಕಂಗೊಳಿಸುವ ಹಸುರು ಹೊದ್ದ ಮಸೂರಿ

**ಪರ್ವತಗಳ ರಾಣಿ 'ಮಸೂರಿ' ಮುಂಗಾರಿನಲ್ಲಿ ಮಿಂದೇಳುವ ಚೆಲುವನ್ನು ಕಣ್ತುಂಬಿಕೊಳ್ಳುವುದೇ ಸುಂದರ ಅನುಭೂತಿ. ಭೂಮಿಗಿಳಿದ ಮುಗಿಲ ಪರದೆಯೊಳಗೆ ಬಚ್ಚಿಟ್ಟುಕೊಂಡ ಗಿರಿಶಿಖರಗಳು, ನದಿತೊರೆಗಳು, ಜಲಪಾತ, ಕಂದರಗಳ ಸೊಬಗೆಲ್ಲಾ ಒಟ್ಟಿಗೇ ಅನಾವರಣಗೊಳ್ಳುವುದು ಮಳೆಗಾಲದಲ್ಲೇ.**

**■ ಸಬೀನಾ ಎ.**

'ಮಸೂರಿ' ಅಂದರೆ ಪರ್ವತಗಳ ರಾಣಿ, ಸ್ವರ್ಗದ ರಾಜಧಾನಿ. ಉತ್ತರಾಖಂಡದ ರಾಜಧಾನಿ ಡೆಹ್ರಾಡೂನ್‌ನಿಂದ 35 ಕಿ.ಮೀ. ದೂರದಲ್ಲಿದೆ. ಮಸೂರಿಗೆ ಭೇಟಿ ನೀಡದ ಡೆಹ್ರಾಡೂನ್ ಪ್ರಯಾಣ ಅಪೂರ್ಣ ಎಂಬ ಮಾತು ಇಲ್ಲಿ ಜನಜನಿತ.

ಹಿಮಾಲಯ ಶ್ರೇಣಿಯ ತಪ್ಪಲಿನಲ್ಲಿರುವ ಈ ಗಿರಿಧಾಮಗಳು ಸಮುದ್ರಮಟ್ಟದಿಂದ 6578 ಅಡಿ ಎತ್ತರದಲ್ಲಿವೆ. ಡೆಹ್ರಾಡೂನ್‌ನಿಂದ ಮಸೂರಿಯ ದಾರಿಯೇ ಮನಮೋಹಕ. ಕಿರಿದಾದ ರಸ್ತೆ, ಕಾರಿನ ಕಿಟಕಿಗಳಿಂದ ಮುಖದ ಮೇಲೆ ಬೀಳುವ ಮಳೆ ಹನಿಗಳು; ಒಂದೆಡೆ ಗುಡ್ಡ, ಮತ್ತೊಂದೆಡೆ ಪ್ರಪಾತ; ಕಗ್ಗತ್ತಲ ಕಣಿವೆ ಒಳಗೆ ಸಾಗುತ್ತಿರುವಂತೆ ಆಗಾಗ್ಗೆ ಆವರಿಸುವ ದಟ್ಟ ಮಂಜು; ಎದುರು ನೋಡಿದರೆ ಬೃಹತ್ ಕ್ಯಾನ್‌ವಾಸ್‌ನಲ್ಲಿ ಮೂಡಿದ ಹಸುರು ಗೋಡೆಯ ಮೇಲೆ ವರ್ಣಮಯ ವಿನ್ಯಾಸಗಳುಳ್ಳ ಹೂದೋಟದಂತೆ ಕಾಣುವ ಮಸೂರಿಯ ಊರುಗಳು.

ಲೈಬ್ರರಿ ಚೌಕ್ ಮಸೂರಿಯ ಮೊದಲ ನಿಲ್ದಾಣ ಎಂದರೆ ತಪ್ಪಾಗಲಾರದು. ಈ ನಿಲ್ದಾಣ ತಲುಪಿ ಮಸೂರಿಯ ವಿಶಾಲ ರೂಪ ನೋಡುವ ಆತುರದಲ್ಲಿದ್ದ ನಮಗೆ ಬಿಟ್ಟೂ ಬಿಡದ ಮಳೆ ಮೂಲೆಗೆ ಕೂರಿಸಿತ್ತು. ಆದರೆ, ಮುಂಗಾರು ಮಳೆ ಒಂದು ಹಾಡು ಎಂಬಂತೆ ಪ್ರವಾಸಿಗರು ರಸ್ತೆಗಿಳಿದು ಕುಣಿದರು. ಬಣ್ಣಬಣ್ಣದ ರೇನ್‌ಕೋಟ್‌ಗಳು, ಕೊಡೆಗಳು, ಹೊಳೆಯುತ್ತಿರುವ ಆ ರಸ್ತೆಗಳು ಸುಖದ ನಿಲ್ದಾಣವೇ ಸರಿ.